ನಾನು ಇವತ್ತು ಅಪಾದನೆ ಮಾಡುತ್ತಿಲ್ಲ. ಸರ್ಕಾರಿ ಆಜ್ಞೆಯ ನಂಬರ್ ಕೂಡ ಇದರಲ್ಲಿ ಇದೆ. ಆದರೆ ಇವತ್ತಿನವರೆಗೆ ಕೂಡ ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡಿ ಅವನ ವಿರುದ್ಧ ಯಾವುದೇ ಎನ್‌ಕ್ವೈರಿ ಮಾಡಿಲ್ಲ. ಸಂಬಂಧಪಟ್ಟವರನ್ನು ಅಮಾನತ್ತಿನಲ್ಲಿಡುವುದಕ್ಕೆ ಸರ್ಕಾರಕ್ಕಿರುವ ಸಮಸ್ಯೆ ಏನು? ದಯವಿಟ್ಟು ಮಾನ್ಯ ಮಂತ್ರಿಯವರು ಇದಕ್ಕೆ ಉತ್ತರ ಹೇಳಬೇಕು.

ಶ್ರೀ ಎ.ಎನ್. ಗುರುಸ್ವಾಮಿ :— ಮಾನ್ಯ ಅಧ್ಯಕ್ಷರೆ, ಕೆ.ಆರ್.ಎಸ್.ನಿಂದ ಕುಡಿಯುವ ನೀರು ಮೈಸೂರಿನಲ್ಲಿ ನನ್ನ ಕ್ಷೇತ್ರಕ್ಕೆ ಕೂಡ ಬರುತ್ತದೆ. ದಿವಂಗತ ಶ್ರೀಮಾನ್ ಗುಂಡೂರಾವ್ ಅವರು ಮುಖ್ಯಮಂತ್ರಿ ಆಗಿದ್ದಂಥ ಕಾಲದಲ್ಲಿ, ಮೈಸೂರಿನ ದಕ್ಷಿಣ ಭಾಗಕ್ಕೆ ಕಬಿನಿ ನದಿಯಿಂದ ನೀರನ್ನು ಒದಗಿಸಬೇಕೆನ್ನುವ ಸಲುವಾಗಿ ಒಂದು ಯೋಜನೆಯನ್ನು ಹಾಕಿಕೊಂಡು ಸರ್ವೇಯನ್ನು ಕೂಡ ಮಾಡಿದ್ದಾರೆ. ಆದ್ದರಿಂದ ಈ ಕಾರ್ಯಕ್ರಮವನ್ನು ಯಾವಾಗ ಕೈಗೆತ್ತಿಕೊಳ್ಳುತ್ತೀರಿ ಎನ್ನುವ ಬಗ್ಗೆ ದಯವಿಟ್ಟು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ :— ಮಾನ್ಯ ಅಧ್ಯಕ್ಷರೆ, ಆ ಏರಿಯಾಗಳಲ್ಲಿ ಸರ್ವೆ ಮಾಡತಕ್ಕಂಥ ಕೆಲಸ ಬಿಟ್ಟುಹೋಗಿದ್ದರೆ ಸಂಬಂಧಪಟ್ಟ ಶಾಸಕರು ನನ್ನ ಹತ್ತಿರ ಬಂದು ಮಾತನಾಡಲಿ, ಆ ಏರಿಯಾವನ್ನು ಕೂಡ ಈ ಯೋಜನೆಯೊಳಗೆ ಸೇರಿಸತಕ್ಕಂಥ ಕೆಲಸವನ್ನೂ ನಾವು ಮಾಡುತ್ತೇವೆ.

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ.

ಅಧ್ಯಕ್ಷರು :— ಶ್ರೀ ವಿಶ್ವೇಶ್ವರ ಹೆಗಡೆ ಅವರೇ ತಾವು ಮುಂದಿನ ಪ್ರಶ್ನೆಯನ್ನು ಕೇಳಿ.

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಸಚಿವರು ಉತ್ತರ ಕೊಡುವುದು ಬೇಡವೇ?

ಅಧ್ಯಕ್ಷರು :— ತಮಗೆ ಸಚಿವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ; ಆದ್ದರಿಂದ ತಾವು ಕುಳಿತುಕೊಳ್ಳಿ. ಮಾನ್ಯ ಹೆಗಡೆ ಅವರೇ ತಾವು ಈಗ ಪ್ರಶ್ನೆ ಕೇಳಿ. ಇಲ್ಲದಿದ್ದರೆ ನಿಮ್ಮ ಪ್ರಶ್ನೆ ಲ್ಯಾಪ್ಸ್ ಆಗುತ್ತೆ.

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೆ, ನನಗೆ ಸರ್ಕಾರದಿಂದ ಸರಿಯಾದ ಉತ್ತರ ಬಂದಿಲ್ಲ. ನಾನು ಸರ್ಕಾರದ ನಿರ್ಲಕ್ಷತೆಗೆ ವಿರೋಧಮಾಡಿ, ಪ್ರತಿಭಟನೆ ವ್ಯಕ್ತಪಡಿಸಿ ಸದನದಿಂದ ಹೊರ ನಡೆಯುತ್ತೇನೆ.

(ಈ ಹಂತದಲ್ಲಿ ಬಿ.ಜೆ.ಪಿ ಸದಸ್ಯರಾದ ಶ್ರೀ ಎ. ರಾಮದಾಸ್‌ರವರು ಸಭಾತ್ಯಾಗ ಮಾಡಿದರು)